ಸುಳ್ಯ ತಾಲ್ಲೂಕಿನಲ್ಲಿ ಸರಕಾರಿ ನೌಕರರಿಗೆ ವಸತಿ ಗೃಹಗಳನ್ನು ನಿರ್ಮಿಸುವುದು.

೧೨೮೫. ಶ್ರೀ ಕುಶಾಲ (ಸುಳ್ಯ).—ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸುಳ್ಯ ತಾಲ್ಲೂಕಿನಲ್ಲಿ ಸರ್ಕಾರದ ನೌಕರರಿಗಾಗಿ ಈ ವರೆಗೆ ನಿರ್ಮಾಣವಾಗಿರುವ ವಸತಿ ಗೃಹಗಳ ಸಂಖ್ಯೆ ಎಷ್ಟು ?

ಆ) ಮುಂಜೂರಾತಿ ದೊರೆತಿದ್ದು ನಿರ್ಮಾಣವಾಗದೆ ಇರುವ ವಸತಿ ಗೃಹಗಳ ಸಂಖ್ಯೆ ಎಷ್ಟು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

ಅ) ೪೭

ಆ) ಈ ಬಗ್ಗೆ ಯಾವುದು ಇರುವುದಿಲ್ಲ.

ಪುತ್ತೂರು ತಾಲ್ಲೂಕಿನಲ್ಲಿ ಸೇತುವೆ ನಿರ್ಮಿಸುವುದು.

೯೩೪. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪುತ್ತೂರು ತಾಲ್ಲೂಕಿನ ಸವಣೂರು ರಸ್ತೆಗೆ ಸೇತುವೆಯನ್ನು ನಿರ್ಮಿಸಲು ಮುಂಜೂರಾತಿ ನೀಡಲಾಗಿದೆಯೇ ?

ಆ) ಹಾಗಿದ್ದಲ್ಲಿ ಈ ಸೇತುವೆ ಕೆಲಸವು ಆರಂಭವಾಗದೆ ಇರಲು ಕಾರಣವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಇಲ್ಲ

ಆ) ಪ್ರಶ್ನೆ (ಅ) ಗೆ ಕೊಟ್ಟಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಕೋಲಾರ ಜಿಲ್ಲೆ ಮತ್ತು ಮುಳಬಾಗಿಲು ತಾಲ್ಲೂಕಿನಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ, ಹಿಂದುಳಿದ ವರ್ಗಗಳ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ವಿದ್ಯಾರ್ಥಿನಿಲಯಗಳ ಬಗ್ಗೆ,

೧೨೯೭. ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೋಲಾರ ಜಿಲ್ಲೆ ಮತ್ತು ಮುಳಬಾಗಿಲು ತಾಲ್ಲೂಕಿನಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸಂಖ್ಯೆ ?

ಆ) ಈ ವಿದ್ಯಾರ್ಥಿ ನಿಲಯಗಳಿಗೆ ಸರ್ಕಾರ ಕಟ್ಟಡಗಳನ್ನು ಒದಗಿಸಿದೆಯೆ ?

ಇ) ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ವಿದ್ಯಾರ್ಥಿನಿಲಯಗಳ ಮಂಜೂರಾತಿ ಸಂಖ್ಯೆ ಇದೆಯೇ ?

ಈ) ಪ್ರೌಢಶಾಲೆಗಳಿರುವ ಸ್ಥಳಗಳಲ್ಲಿ ಹೊಸ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಬೇಡಿಕೆಗಳೇನಾದರೂ ಬಂದಿವೆಯೇ ?

ಉ) ವಿದ್ಯಾರ್ಥಿನಿಲಯಗಳಿಲ್ಲದ ಸ್ಥಳಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—

(ಅ ಮತ್ತು ಆ)	ಪ.ಜಾತಿ, ಪ.ವರ್ಗಗಳ ಇಲಾಖೆ	ಕೋಲಾರ ಜಿಲ್ಲೆ	ಮುಳಬಾಗಿಲು ತಾಲ್ಲೂಕು	ಸರ್ಕಾರಿ ಕಟ್ಟಡ ಒದಗಿಸಿರುವುದು (ಕೋಲಾರ ಜಿಲ್ಲೆ)
೧) ಪದವಿ ಪೂರ್ವ	...	೪೨	೩	೧೦
೨) ಪದವಿ ನಂತರ	..	೧೦	೧	೧
ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಇಲಾಖೆ				
೧) ಪದವಿ ಪೂರ್ವ		೩೫	೬	೫
೨) ಪದವಿ ನಂತರ		೪	–	–

ಇ) ಇಲ್ಲ, ವಿದ್ಯಾರ್ಥಿನಿಲಯಗಳಲ್ಲಿ ಮಂಜೂರಾತಿ ಸಂಖ್ಯೆಗೆ ಅನುಗುಣವಾಗಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗುವುದು. ಬೇಡಿಕೆಯನ್ನು ಗಮನಿಸಿ ಸ್ಥಳಾವಕಾಶ ಹಾಗೂ ಆಯವ್ಯಯಕ್ಕೆ ಅನುಗುಣವಾಗಿ ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯೆಯನ್ನು ಹೆಚ್ಚಿಸಲಾಗುತ್ತದೆ.

ಈ) ಹಾದು, ಹೊಸ ವಿದ್ಯಾರ್ಥಿನಿಲಯಗಳನ್ನು ತೆರೆಯಲು ಬೇಡಿಕೆಗಳು ಬಂದಿವೆ.

ಉ) ಹೊಸ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸುವ ವಿಷಯ ಪರಿಶೀಲನೆಯಲ್ಲಿದೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳಿಗಾಗಿ ಸಮುದಾಯ ಕೇಂದ್ರಗಳನ್ನು ಕಟ್ಟುವುದು.

೧೦೫೩. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳಿಗಾಗಿ ಸಮುದಾಯ ಕೇಂದ್ರಗಳನ್ನು ಕಟ್ಟಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ೧೯೮೨–೮೩, ೧೯೮೩–೮೪, ೧೯೮೪–೮೫ನೇ ಸಾಲುಗಳಿಗೆ ಮಂಜೂರಾದ ವೊತ್ತ (ಪ್ರತಿ ಜಿಲ್ಲೆಯ ವಿವರ ಕೊಡಿ)

ಆ) ಪೂರ್ಣಗೊಂಡ ಕಟ್ಟಡಗಳ ಸಂಖ್ಯೆ ಮತ್ತು ನಿರ್ಮಾಣ ಹಂತದಲ್ಲಿರುವ ಕಟ್ಟಡಗಳ ಸಂಖ್ಯೆ.

ಇ) ೧೯೮೪–೮೫ ಮತ್ತು ೧೯೮೫–೮೬ನೇ ಸಾಲುಗಳಲ್ಲಿ ಅಥಣಿ ತಾಲ್ಲೂಕಿಗೆ ಮಂಜೂರಾದ ಸಮುದಾಯ ಕೇಂದ್ರ ಕಟ್ಟಡಗಳ ಸಂಖ್ಯೆ.

ಈ) ಇದರಲ್ಲಿ ಪೂರ್ಣಗೊಂಡ ಕಟ್ಟಡಗಳ ಸಂಖ್ಯೆ ಮತ್ತು ಕಟ್ಟಲಾದ ಹಳ್ಳಿಗಳ ಹೆಸರು.

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು). —

ಅ) ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳಿಗಾಗಿ ೧೯೮೨–೮೩, ೧೯೮೩–೮೪ ೧೯೮೪–೮೫ನೇ ಸಾಲುಗಳಲ್ಲಿ ಸಮುದಾಯ ಕೇಂದ್ರ ಕಟ್ಟಡಗಳ ನಿರ್ಮಾಣಕ್ಕಾಗಿ ಹಣ ಮಂಜೂರಾಗಿರುವುದಿಲ್ಲ.

ಆ) 'ಅ' ಪ್ರಶ್ನೆಗೆ ಕೊಟ್ಟ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಸಮುದಾಯ ಕೇಂದ್ರ ಕಟ್ಟಡಗಳ ನಿರ್ಮಾಣ ಕಾರ್ಯಕ್ರಮವನ್ನು ೧೯೮೨–೮೩ನೇ ಸಾಲಿನಿಂದ ನಿಲ್ಲಿಸಲಾಗಿದೆ. ಮತ್ತು ಅಥಣಿ ತಾಲ್ಲೂಕಿಗೆ ಯಾವುದೇ ಕಟ್ಟಡ ಮಂಜೂರಾಗಿರುವುದಿಲ್ಲ.

ಈ) 'ಇ' ಪ್ರಶ್ನೆಗೆ ಕೊಟ್ಟ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.